ದಿನಾಂಕ 03-01-2019 ರಂದು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಮಾಣ ವಚನ ಭೋದಿಸಲಾಯಿತು. ಸಾಕ್ಷಿಗೆ ಕನ್ನಡ ಬಾರದ ಕಾರಣ ಶ್ರೀ.ಸಿ..ಎಸ್.ಕೆ. ವಕೀಲರನ್ನು ಅನುವಾದಕಾರರನ್ನಾಗಿ ನೇಮಕ ಮಾಡಲಾಯಿತು.

**ಪಾಟೀ ಸವಾಲುಃಃ ಪ್ರತಿವಾದಿ ಪರ ವಕೀಲರಾದ ಶ್ರೀ.ಕೆ.ಎನ್.ಎಸ್.ರವರಿಂದಃಃ**

ನನ್ನನ್ನು ನಾಯಿಂದ್ರಹಳ್ಳಿ ಕಾಲೋನಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ. ವಿವಾಹ ಆಗಿ ಸುಮಾರು 17 ವರ್ಷ ಅಗಿದೆ. ಯಾವ ವರ್ಷದಲ್ಲಿ ವಿವಾಹ ಅಗಿದೆ ಎಂದು ನೆನಪು ಇಲ್ಲ. ನನ್ನ ವಿವಾಹದ ಕಾಲದಲ್ಲಿ, ನನ್ನ ತಾಯಿ, ನನ್ನ ಅಜ್ಜಿ, ನನ್ನ ತಂದೆ ಬದುಕಿದ್ದರು. ತಾತ ಬದುಕಿರಲಿಲ್ಲ. ನನ್ನ ತಾತನನ್ನು ನಾನು ನೋಡಿಲ್ಲ. ನನ್ನ ಅಜ್ಜಿಯು 2009 ರಲ್ಲಿ ತಿರಿಕೊಂಡಿರುತ್ತಾರೆ. 1ನೇ ಪ್ರತಿವಾದಿಯು ನನ್ನ ತಾಯಿಯ ಅಕ್ಕನಾಗಬೇಕು. ನಾನು ಈ ಬಗ್ಗೆ ದಾಖಲೆಯನ್ನು ನ್ಯಾಯೂಲಯಕ್ಕೆ ನೀಡಿರುತ್ತೇನೆ. ದಾಖಲೆಯನ್ನು ಕೊಟ್ಟಿರುತ್ತೇನೆ ದಾಖಲೆಯ ಹೆಸರು ಗೊತ್ತಿಲ್ಲ.

ನಮ್ಮ ಒಟ್ಟು ಕುಟುಂಬದ ಬಗ್ಗೆ ದಾಖಲಾತಿಗಳನ್ನು ನೀಡಿರುತ್ತೇನೆ. ನಾವು 30-40 ವರ್ಷದಿಂದ ಒಟ್ಟು ಕುಟುಂಬದಲ್ಲಿ ವಾಸ ಇರುತ್ತವೆ. ಈಗ ನಾವು ಒಟ್ಟು ಕುಟುಂಬದಲ್ಲಿ ವಾಸ ಇಲ್ಲ. ನನ್ನ ತಾತನ ಹೆಸರು ಬುಡ್ಡಪ್ಪ. ನಮ್ಮ ಗ್ರಾಮದಲ್ಲಿ ಬುಡ್ಡಪ್ಪ ಎಂಬುವರು 3 ಜನರು ಇದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾತನ ಹೆಸರು ಬುಡ್ಡಪ್ಪ. ಬುಡ್ಡಪ್ಪ ನನ್ನ ತಾತ ಎನ್ನುವ ಬಗ್ಗೆ ದಾಖಲಾತಿಯನ್ನು ನೀಡಿರುತ್ತೇನೆ. ನನ್ನ ತಾತ ಬುಡ್ಡಪ್ಪನೇ ಬೇರೆ. 1ನೇ ಪ್ರತಿವಾದಿ ಲಗುಮಕ್ಕನ ತಂದೆಯೇ ಬೇರೆ ಎಂದರೆ ಸಾಕ್ಷಿಯು ಇಬ್ಬರೂ ಒಬ್ಬನೇ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯ ಹೆಸರು ಸೀತಮ್ಮ. ನನ್ನ ಅಜ್ಜಿ ಸೀತಮ್ಮ ಎಂಬುವ ಬಗ್ಗೆ ದಾಖಲಾತಿಯನ್ನು ನೀಡಿರುತ್ತೇನೆ. ನಮ್ಮ ತಾಯಿ ಹುಟ್ಟುವ ಮೊದಲೇ ಲಗುಮಕ್ಕನ ತಂದೆ ಬುಡ್ಡಪ್ಪ ತಿರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಪಿಡಬ್ಲ್ಯೂ: 1 ಓ.ಎಸ್.

ನಂ.232/2016

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

(ಶ್ರೀ.ಶಿವಕುಮಾರ ಜಿ.ಜೆ)
ಅಪರ ಸಿ.ನ್ಯಾ. ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.